# ದಾಂಪತ್ಯದೊಂದಿಗೆ ಅಧ್ಯಾತ್ಮ

'ಯಾರು ಹಿತವರು ನಿನಗೆ ಈ ಮೂವರೊಳಗೆ – ನಾರಿಯೋ, ಧಾರುಣಿಯೋ, ಬಲು ಧನದ ಸಿರಿಯೋ' ಎನ್ನುವ ಪುರಂದರದಾಸರ ಕೀರ್ತನೆ ಬಹು ಜನಪ್ರಿಯ. ಹಾಡಿನ ಗುಂಗನ್ನು ಬಿಡಿಸಿಕೊಂಡು ನೋಡಿದರೆ, ಕೀರ್ತನೆಯಲ್ಲಿ ಎರಡು ಸಮಸ್ಯೆಗಳು ಕಾಣಿಸುತ್ತವೆ. ಅವುಗಳೆಂದರೆ: ಮಣ್ಣು ಮತ್ತು ಹಣದ ಜೊತೆಗೆ ಹೆಣ್ಣನ್ನು ಸೇರಿಸಿರುವುದು ಹಾಗೂ ಗಂಡಿಗೆ ಲಭ್ಯವಿರುವ ಸಂಗತಿಗಳಲ್ಲಿ ಹೆಣ್ಣು ಕೂಡ ಒಂದು ಆಯ್ಕೆಯೆನ್ನುವುದು. ಈ ಕೀರ್ತನೆಯ ಹಿನ್ನೆಲೆಯಲ್ಲಿ ಪುರಂದರದಾಸರನ್ನು ಸ್ತ್ರೀವಿರೋಧಿ ಎಂದು ಹೇಳಿದರೆ ಅದು ಆತುರದ ಮಾತಾಗುತ್ತದೆ. ಹೆಣ್ಣನ್ನು ಮಾಯೆಯ ರೂಪದಲ್ಲಿ ಬಿಂಬಿಸಿರುವವರಲ್ಲಿ ಪುರಂದರದಾಸರು ಮೊದಲಿಗರೂ ಅಲ್ಲ, ಕೊನೆಯವರೂ ಅಲ್ಲ. ಗಂಡಿನ ಅಧ್ಯಾತ್ಮ ಸಾಧನೆಗೆ ಹೆಣ್ಣು ತೊಡಕೆನ್ನುವ ನಂಬಿಕೆ ಹಾಗೂ ಹೆಣ್ಣೆಂದರೆ 'ಮುನಿ'ಯುವವರು ಪುರಾಣಗಳಲ್ಲಿ ಮಾತ್ರವಲ್ಲ, ವರ್ತಮಾನದಲ್ಲೂ ಇದ್ದಾರೆ.

ಅಧ್ಯಾತ್ಮ ಸಾಧನೆಯಲ್ಲಿ ಕಾಮನಿಗ್ರಹ ಮುಖ್ಯವಾದುದು ಎನ್ನುವುದೊಂದು ನಂಬಿಕೆ. ಹೆಣ್ಣು ಮತ್ತು ಗಂಡು ಇಬ್ಬರಿಗೂ ಈ ಮಾತನ್ನು ಅನ್ವಯಿಸಿದರೆ ಹೆಚ್ಚು ಸಮಸ್ಯೆ ಕಾಣಿಸುವುದಿಲ್ಲ. ಸಮಸ್ಯೆ ಇರುವುದು, ಅಧ್ಯಾತ್ಮವನ್ನು ಗಂಡು ಸಾಧಿಸಬೇಕಾದ ಸಿದ್ಧಿಯ ರೂಪದಲ್ಲಿ ಹಾಗೂ ಆ ಸಾಧನೆಗೆ ಹೆಣ್ಣು ತೊಡಕಾಗಿ ಪರಿಣಮಿಸುತ್ತಾಳೆ ಎಂದು ಭಾವಿಸುವುದರಲ್ಲಿ. ಅಧ್ಯಾತ್ಮ ಗಂಡಿಗೆ ಸಂಬಂಧಿಸಿದ್ದು ಎನ್ನುವ ಭಾವನೆಯೇ ಹೆಣ್ಣನ್ನು ಎರಡನೆಯವಳಾಗಿ ನೋಡುವಂತಹದ್ದು. ಭೋಗ ಹಾಗೂ ಮಾಯೆಯ ರೂಪದಲ್ಲಿ ಹೆಣ್ಣನ್ನು ನೋಡುವುದರಲ್ಲಿ ಗಂಡಿನ ವೈಭವೀಕರಣವಿದೆ ಹಾಗೂ ಹೆಣ್ಣನ್ನು ಕೀಳಾಗಿ ಕಾಣುವ ಧೋರಣೆಯಿದೆ. ಇವೆರಡೂ ಆರೋಗ್ಯಕರ ಸಮಾಜಕ್ಕೆ ಅಪಾಯಕಾರಿ.

ಋಷಿ ಪರಂಪರೆ ಮಾತ್ರವಲ್ಲ, ಮಹಾತ್ಮ ಗಾಂಧೀಜಿ ಕೂಡ ಬ್ರಹ್ಮಚರ್ಯಕ್ಕೆ ಒತ್ತು ಕೊಟ್ಟಿದ್ದರು. ಆದರೆ, ಮಹಾತ್ಮರ ಬ್ರಹ್ಮಚರ್ಯದ ಪರಿಕಲ್ಪನೆಯಲ್ಲಿ ಹೆಣ್ಣನ್ನು ಹೀಗಳೆವ ಮನೋಭಾವ ಇರಲಿಲ್ಲ. ಸಮಾಜಸೇವೆಯಲ್ಲಿ ತೊಡಗಿಕೊಳ್ಳುವವರಿಗೆ ಮನೋನಿಗ್ರಹ ಅಗತ್ಯ ಎನ್ನುವುದು ಅವರ ನಂಬಿಕೆಯಾಗಿತ್ತು. ಆ ಕಾರಣದಿಂದಲೇ ಅವರು 'ಮದುವೆ'ಯನ್ನು ವಿರೋಧಿಸಲಿಲ್ಲ. ಮದುವೆಯ ನಂತರವೂ ಬ್ರಹ್ಮಚರ್ಯದ ಪಾಲನೆಯ ಅಗತ್ಯವನ್ನು ಅವರು ಪ್ರತಿಪಾದಿಸಿದ್ದರು. ಹೆಣ್ಣು–ಗಂಡಿನ ನಡುವಿನ ಪರಿಶುದ್ಧವಾದ ಸ್ನೇಹ–ಪ್ರೇಮದ ಬಗ್ಗೆ ಅವರಿಗೆ ವಿರೋಧವಿರಲಿಲ್ಲ.

ಗಾಂಧೀಜಿ ಪಾಲಿಸಿದ ಹಾಗೂ ಪ್ರತಿಪಾದಿಸಿದ ಕಟು ಬ್ರಹ್ಮಚರ್ಯ ಕೂಡ ಸಮಾಜದ ಆರೋಗ್ಯಕ್ಕೆ ಪೂರಕವಾದುದಲ್ಲ. ಕಾಮವನ್ನು ಚೈತನ್ಯಹರಣದ ರೂಪದಲ್ಲಿ ನೋಡುವ ಧೋರಣೆಯಿಂದಾಗಿ ಸಮಾಜಸೇವೆಗೆ ಬ್ರಹ್ಮಚರ್ಯ ಪೂರಕ ಎನ್ನುವ ತರ್ಕ ಹುಟ್ಟಿಕೊಂಡಿದೆ. ಕಾಮದಿಂದ ಚಿತ್ತ ಚಂಚಲಗೊಳ್ಳುತ್ತದೆ; ಹಾಗಾಗಿ, ದೇಶಸೇವೆ–ಈಶಸೇವೆಯಲ್ಲಿ ತೊಡಗಿಕೊಳ್ಳುವವರು ಸ್ತ್ರೀಸಂಗದಿಂದ ದೂರವಿರಬೇಕು ಎನ್ನಲಾಗುತ್ತದೆ. ಇಂಥ ನಂಬಿಕೆಗಳೆಲ್ಲವೂ ಗಂಡಿನ ದೃಷ್ಟಿಕೋನದಿಂದಲೇ ರೂಪುಗೊಂಡಂತಹವು. ವೀರ್ಯನಷ್ಟ, ಚಿತ್ತಚಾಂಚಲ್ಯ ಎನ್ನುವ ಮಾತುಗಳೆಲ್ಲ ಗಂಡಿಗೆ ಸಂಬಂಧಿಸಿದವು; ಹೆಣ್ಣನ್ನು ಜಡ ರೂಪದಲ್ಲಿ ನೋಡುವಂತಹವು.

ಆರೋಗ್ಯಕರ ಲೈಂಗಿಕ ಅಭ್ಯಾಸಗಳಿಂದ ಮೈಯಿ ಮತ್ತು ಮನಸ್ಸು ಸಬಲಗೊಳ್ಳುವುದನ್ನು ವೈಜ್ಞಾನಿಕ ಸಂಶೋಧನೆಗಳು ರುಜುವಾತುಪಡಿಸಿವೆ. ವೀರ್ಯನಾಶ, ಶಕ್ತಿಹ್ರಾಸ ಎನ್ನುವುದೆಲ್ಲ ಕಲ್ಪಿತ ಕಥನಗಳು. ಕಾಮಶಾಸ್ತ್ರ, ಕಾವ್ಯಪರಂಪರೆ ಹಾಗೂ ವಿವಿಧ ಪ್ರಕಾರಗಳಲ್ಲಿ ಕಲೆಯ ಅಭಿವ್ಯಕ್ತಿಗಳನ್ನು ನೋಡಿದರೆ ಭಾರತ ಲೈಂಗಿಕವಿಜ್ಞಾನದ ಪ್ರಯೋಗಶಾಲೆಯಂತೆ ಕಾಣಿಸುತ್ತದೆ. ಇದೇ ಭಾರತದಲ್ಲಿ ಲೈಂಗಿಕತೆಯ ತಪ್ಪು ತಿಳಿವಳಿಕೆಗಳು ತುಂಬಿಕೊಂಡಿವೆ. ಇಂದ್ರಿಯ ನಿಗ್ರಹವನ್ನು ಸಾಧನೆಯ ರೂಪದಲ್ಲಿ ನೋಡುವ, ಹೆಣ್ಣನ್ನು ಕಂಡರೆ 'ಮುನಿ'ಯುವ ಪರಂಪರೆ ಇರುವಂತೆಯೇ, ಸಂಭೋಗವನ್ನು ಸಮಾಧಿಯೆಡೆಗಿನ ಮಾರ್ಗದಂತೆ ನೋಡುವ ಸಾಧಕರೂ ಇದ್ದಾರೆ. ಈ ಮಣ್ಣಿನಲ್ಲಿ ಕಾಮ ಕಲೆಯಾಗಿರುವಂತೆ, ವಿಕೃತಿಯೂ ಆಗಿದೆ.

'ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ/ ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ/ ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ್ಲ/ ಮನದ ಮುಂದಣ ಆಶಯೇ ಮಾಯೆ ಕಾಣಾ ಗುಹೇಶ್ವರ!' ಎನ್ನುವ ಅಲ್ಲಮಪ್ರಭುವಿನ ಮಾತು ನಮಗೆ ಜ್ಯೋತಿರ್ಲಿಂಗವಾಗಬೇಕು. ಗಂಡಿನ ವಿಕೃತಿಗಳು ಹಾಗೂ ದೌರ್ಬಲ್ಯಗಳಿಗೆ ಹೆಣ್ಣಿನ ರೂಪ ಕೊಡುವುದು ಹೆಣ್ಣಿಗೆ ಮಾಡುವ ಮೋಸವಷ್ಟೇ ಅಲ್ಲ, ಗಂಡು ತನಗೆ ಮಾಡಿಕೊಳ್ಳುವ ವಂಚನೆಯೂ ಹೌದು. ನಮಗೆ ಅಗತ್ಯವಾದುದು ಹೆಣ್ಣು–ಗಂಡು ಸಮಾನ ಎನ್ನುವ, ಪರಿಸ್ಪರರ ಸಖ್ಯದಲ್ಲಿ ಸಮಾಜದ ಆರೋಗ್ಯವನ್ನು ಸಾಧಿಸುವ ದೃಷ್ಟಿಕೋನ.

ಅತ್ಯಾಚಾರ ಪ್ರಕರಣಗಳು ಹೆಚ್ಚಳವಾಗುತ್ತಿರುವುದರ ಜೊತೆಗೆ, ಧರ್ಮ ಮತ್ತು ನೈತಿಕತೆಯ ಮಾದರಿಗಳಾಗಬೇಕಿದ್ದ ಸನ್ಯಾಸಿಗಳ ರಾಸಲೀಲೆಗಳು ಆಗಾಗ ಪ್ರಕಟಗೊಳ್ಳುತ್ತಲೇ ಇವೆ. ಇಂಥ ವಿದ್ಯಮಾನಗಳ ಹಿಂದೆ ಲೈಂಗಿಕತೆಯ ಪೂರ್ವಗ್ರಹಗಳು ಇರುವಂತೆಯೇ ಇಂದ್ರಿಯ ನಿಗ್ರಹಕ್ಕೂ ಅಧ್ಯಾತ್ಮಕ್ಕೂ ಕಲ್ಪಿಸಿರುವ ಸಂಬಂಧವೂ ಇದೆ. ಇವೆರಡೂ ಸಾಮಾಜಿಕ ಸ್ವಾಸ್ಥ್ಯಕ್ಕೆ ಅಪಾಯಕಾರಿ. ಆರೋಗ್ಯಕರ ಲೈಂಗಿಕ ಬದುಕು ಸಂಸಾರಿಗಳಿಗೂ ಬೇಕು, ಸನ್ಯಾಸಿಗಳಿಗೂ ಅಗತ್ಯ. ಸ್ಥಾವರದ ರಚನೆಗಳಿಗೆ ಅಂಟಿಕೊಂಡಿರುವ ಸನ್ಯಾಸಿಗಳು, ಹೆಣ್ಣಿನಿಂದ ದೂರವಿರಲು ತೋರಿಕೆಗಾದರೂ ಪ್ರಯತ್ನಿಸುವುದು ವಿಚಿತ್ರ. ಇಂಥ ಪ್ರಯತ್ನ–ಅಪೇಕ್ಷೆ ಅನಾರೋಗ್ಯಕರ, ಅವೈಜ್ಞಾನಿಕ; ಅಪರಾಧಗಳಿಗೆ ಆಸ್ಪದ ಕಲ್ಪಿಸುವಂತಹದ್ದೂ ಹೌದು.

ಇಂದ್ರಿಯ ನಿಗ್ರಹ ದೇಹವನ್ನು ದಂಡಿಸಿಕೊಳ್ಳುವ, ಮೈಮನಗಳಿಗೆ ಮಾಡಿಕೊಳ್ಳುವ ಮೋಸ. ಇಂದ್ರಿಯ ನಿಗ್ರಹದಿಂದ ಆರೋಗ್ಯಕರವಾದ ಏನನ್ನೂ ಸಾಧಿಸಲಾರೆವು. ಮನುಷ್ಯರಿಗೆ ಅಗತ್ಯವಾದುದು ಇಂದ್ರಿಯಗಳ ಸಂಯಮವೇ ಹೊರತು ನಿಗ್ರಹವಲ್ಲ. ಹೆಣ್ಣನ್ನು ಹೊರಗಿಟ್ಟು ನಡೆಸುವ ಅಧ್ಯಾತ್ಮದ ಸಾಧನೆ ಅಪೂರ್ಣವಾದುದು ಹಾಗೂ ಜಡವಾದುದು. ಅಧ್ಯಾತ್ಮದ ಸಾಕ್ಷಾತ್ಕಾರ ಗಂಡು ಮತ್ತು ಹೆಣ್ಣಿನ ಸಹನಡಿಗೆಯೇ ಹೊರತು ಒಂಟಿಪಯಣವಲ್ಲ. ದಾಂಪತ್ಯ ಎನ್ನುವುದು ಅಧ್ಯಾತ್ಮದೊಂದಿಗಿನ ಬಹುದೊಡ್ಡ ಅನುಸಂಧಾನ. ಅಧ್ಯಾತ್ಮ ಸಾಧನೆಗೆ ಗಂಡು ಮತ್ತು ಹೆಣ್ಣಿನ ಸಂಬಂಧ ಪೂರಕವಾದುದು ಎನ್ನುವ ಕವಿಮಾತನ್ನೇ 'ಅರ್ಧನಾರೀಶ್ವರ ತತ್ವ' ಹೇಳುತ್ತದೆ.

■ **ಚಂಪಕಮಾಲಾ**

## ಮಾತೇ ಮುತ್ತು

- ನಿಮ್ಮ ಜೀವನದ ವ್ಯಾಪ್ತಿ, ಮುನ್ನುಗ್ಗುವ ನಿಮ್ಮ ಸಾಮರ್ಥ್ಯವನ್ನು ಅವಲಂಬಿಸಿದೆ. ಹುಚ್ಚು ಧೈರ್ಯಶಾಲಿಗಳಾಗಿದ್ದರೆ, ನಿಮ್ಮ ಜೀವನಕ್ಕೆ ಎಲ್ಲೆಗಳೇ ಇರುವುದಿಲ್ಲ.
  –ಅನೀಸ್ ನಿನ್

- ಅಡೆತಡೆಗಳು ಇಲ್ಲದ ದಾರಿಯೊಂದಿದ್ದರೆ, ಅದು ಬಹುಶಃ ನಿಮ್ಮನ್ನು ಎಲ್ಲಿಗೂ ಕರೆದೊಯ್ಯುವುದಿಲ್ಲ.
  –ಚೆ ಗುವೆರಾ

- ವಿರೋಧ ಎಲ್ಲಿ ಇರುವುದಿಲ್ಲವೋ ಅಲ್ಲಿ ಜಯವೆಂಬುದೇ ಇರುವುದಿಲ್ಲ.
  –ಬರ್ನಾರ್ಡ್ ಷಾ

- ನಿರಂತರವಾಗಿ ಕಲಿಯಿರಿ ಸದಾ ಕಾಲ ಕಲಿಯಲು 'ಇನ್ನೂ ಒಂದು ವಿಷಯ' ಇದ್ದೇ ಇರುತ್ತದೆ.
  –ಸ್ಟೀವ್ ಜಾಬ್ಸ್

- ಕತ್ತಲಿನ ನಡುವೆ ಬೆಳಕನ್ನು ಕಾಣುವಾತ ಆಶಾವಾದಿ. ಹಿಗ್ಗನ್ನು ಆರಿಸುವವನು ನಿರಾಶಾವಾದಿ.
  –ದ.ರಾ. ಬೇಂದ್ರೆ

- ಯಶಸ್ಸು ಎರಡು ಬಾರಿ ಸಂಭವಿಸುತ್ತದೆ. ಒಮ್ಮೆ ಅದು ಮನಸ್ಸಿನಲ್ಲಿ ಗೋಚರಿಸಿದರೆ, ಎರಡನೇ ಬಾರಿ ಭೌತಿಕ ಪ್ರಪಂಚದಲ್ಲಿ ವಾಸ್ತವ ಅನುಭವಕ್ಕೆ ಬರುತ್ತದೆ.
  –ಅಜೀಮ್ ಪ್ರೇಮ್ ಜಿ